# <u>ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ</u>

## <u>ಫೌಜುದಾರಿ ಪ್ರಕರಣ ಸಂಖ್ಯೆ: 31/2024</u>

ಫಿರ್ಯಾದಿಃ ಸರಕಾರದ ಪರವಾಗಿ
ಪೋಲಿಸ್ ನಿರೀಕ್ಷಕರು,
ಹೊನ್ನಾವರ ಪೋಲಿಸ್ ಠಾಣೆ

**-ವಿರುದ್ಧ-**

ಆರೋಪಿಃ ಇಮ್ರಾನ್ ಖಾನ್ ತಂದೆ ವಹಾಜುಲ್ ಹಕ್ ಖಾನ್,
ವಯಸ್ಸುಃ 45 ವರ್ಷಗಳು,
ಉದ್ಯೋಗಃ ಕಂಪನಿಯಲ್ಲಿ ಕೆಲಸ,
ಸಾಕೀನಃ ನ್ಯೂ ರೆಡಿ ಮನಿ ಇಮಾರತ್, ಆರ್-53 ಕ್ಲೀಯರ್ ಮುಂಬೈ, ಹಾಲಿ ವಾಸಃ ಐ ಬಿಲ್ಡಿಂಗ್, ಪ್ಲಾಟ್ ನಂಬರ್ 09, ಕೊನಾರ್ಕ ಪೂರಮ್ ಸೊಸೈಟಿ, ಎನ್.ಆರ್ ಶೀತಲ್ ಪೆಟ್ರೋಲ್ ಪಂಪ್, ಕೊಂಡವಾ, ಪುಣೆ, ಮಹಾರಾಷ್ಟ್ರ ಜಿಲ್ಲೆ-411048.

## <u>ಆರೋಪಣೆ</u>

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಗಳನ್ನ ಹೊರೆಸುತ್ತಿದ್ದೇನೆ.

1.ಮೊದಲೇಯದಾಗಿ ದಿನಾಂಕಃ13-11-2023 ರಂದು ಸಾಯಂಕಾಲ 06-45 ರ ಸಮಯದಲ್ಲಿ ಆರೋಪಿಯು ಹೊನ್ನಾವರ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ರಾಷ್ಟ್ರೀಯ ಹೆದ್ದಾರಿ-69 ರ ಮೇಲೆ ಮಾರುತಿ ಸುಜುಕಿ ಬ್ರೀಜಾ ಕಾರಿನ ಸಂಖ್ಯೆಎಮ್.ಎಚ್-12/ವಿ.ಕ್ಯೂ-0154 ನ್ನು ಹೊನ್ನಾವರ ಕಡೆಯಿಂದ ಕುಮಟಾ ವಾಹನಗಳು ಸಂಚರಿಸುವ ರಸ್ತೆಯಲ್ಲಿ ಅತಿವೇಗ ಅಥವಾ ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ಕರ್ಕಿ ಗ್ರಾಮದ ರೈಲ್ವೇ ಸ್ಟೇಷನ್ ಕ್ರಾಸ್‌ನಲ್ಲಿ ರೈಲ್ವೇ ಸ್ಟೇಷನ್ ಕಡೆಗೆ ಹೋಗಲು ಯಾವುದೇ ಮೂನ್ಸೂಚನೆಯನ್ನು ನೀಡದೇ, ಸ್ಥಳದಲ್ಲಿದ್ದ ಡಿವೈಡರ್ ಮುಖಾಂತರ ಕುಮಟಾ ಕಡೆಯಿಂದ ಹೊನ್ನಾವರ ಕಡೆಗೆ ವಾಹನಗಳು ಸಂಚರಿಸುವ ರಸ್ತೆಯ ಕಡೆಗೆ ಬರಲು ಮೃತ ವಿನಾಯಕ ತಂದೆ ಶಂಕರ ಹರಿಕಂತ್ರರವರು ಚಲಾಯಿಸುತ್ತಿದ್ದ ಬಜಾಜ ಪಲ್ಸರ್ ಮೋಟಾರು ಸೈಕಲ್ ಸಂಖ್ಯೆಕೆಎ-47/ವಾಯ್-3677 ರ ಹಿಂಬದಿಯಲ್ಲಿ ಚಾಸಾ-6 ಶರತ್ ತಂದೆ ಉಮೇಶ ದುರ್ಗೇಕರರವರನ್ನು ಕ್ರೂಡಿಸಿಕೊಂಡು ಬರುತ್ತಿದ್ದ ಮೋಟಾರು ಸೈಕಲ್ಲಿಗೆ ಆರೋಪಿಯು ಡಿಕ್ಕಿ ಹೊಡೆದು ಅಪಘಾತಪಡಿಸಿದ್ದರಿಂದ ಭಾರತೀಯ ದಂಡ ಸಂಹಿತೆ ಕಲಂ 279 ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

2.ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಮೋಟಾರು ಸೈಕಲ್ ಸವಾರರು ರಸ್ತೆಯ ಮೇಲೆ ಬಿದ್ದು, ಮೋಟಾರು ಸೈಕಲ್ಲಿನ ಹಿಂಬದಿ ಸವಾರನಾದ ಚಾಸಾ-6 ಶರತ್ ತಂದೆ ಉಮೇಶ್ ದುರ್ಗೇಕರರವರಿಗೆ ತಲೆಗೆ, ಹಣೆಗೆ, ಎಡ ಕಾಲಿಗೆ ಮತ್ತು ಮೈಮೇಲೆ ಅಲ್ಲಲ್ಲಿ ಗಾಯ, ಆರೋಪಿಯ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಆರೋಪಿ ಕಾರ ಚಾಲಕನ ಮಕ್ಕಳಾದ ಕುಮಾರಿ ಫರೀಹಾ ತಂದೆ ಇಮ್ರಾನ್ ಖಾನ್ ಮತ್ತು ಕುಮಾರ ಅಯಾನ್ ತಂದೆ ಇಮ್ರಾನ್ ಖಾನ್‌ರವರಿಗೂ ಸಹ ಮೈಮೇಲೆ ಸಾದಾ ಸ್ವರೂಪದ ಗಾಯ ಉಂಟು ಮಾಡಿ, ನೀವು ಭಾರತೀಯ ದಂಡ ಸಂಹಿತೆ ಕಲಂ 337ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

3.ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಮೇಲೆ ಹೇಳಿದ ರೀತಿ ಅಪಘಾತವನ್ನ ಉಂಟುಮಾಡಿದ್ದರಿಂದ, ಮೋಟಾರು ಸೈಕಲ್ಲಿನ ಸವಾರನಾದ ವಿನಾಯಕ ಹರಿಕಂತ್ರರವರಿಗೆ ತಲೆಗೆ, ಕಿವಿಗೆ, ಎಡ ಬದಿಯ ಎದೆಗೆ, ಎಡ ಬುಜಕ್ಕೆ, ಎಡ ಕೈ ತೋಳಿಗೆ ಮುತ್ತ ಮೈಮೇಲೆ ಅಲ್ಲಲ್ಲಿ ಮಾರಣಾಂತಿಕ ಗಾಯಗಳಾಗಿದ್ದರಿಂದ ಅವರನ್ನು ಚಿಕಿತ್ಸೆಗಾಗಿ ಹೊನ್ನಾವರದಿಂದ ಉಡುಪಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದು, ದಿನಾಂಕಃ16-11-2023ರಂದು ಸಾಯಂಕಾಲ 05-00 ಗಂಟೆಗೆ ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆಯಲ್ಲಿದ್ದಾಗ ಚಿಕಿತ್ಸೆ ಫಲಕಾರಿಯಾಗದೇ ಮರಣ ಹೊಂದಿದ್ದು, ಅವರ ಮರಣವು ನಿಮ್ಮ ನಿರ್ಲಕ್ಷತನದಿಂದ ಉಂಟಾದ ಮಾನವ ಹತ್ಯೆಯಲ್ಲದ ಮರಣವಾದ್ದರಿಂದ, ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಪ್ರಕಾರ ಅಪರಾಧ ಎಸಗಿರುತ್ತಿ ಎನ್ನುವ ಅಪಾದನೆಯನ್ನ ಹೊರಿಸುತ್ತಿದ್ದೇನೆ.

ಪ್ರಶ್ನೆ 1. ನೀವು ಸದ್ರಿ ಆರೋಪಣೆಗಳನ್ನ ಒಪ್ಪಿಕೊಳ್ಳುತ್ತೀರೋ?

ಉತ್ತರಃ

ಪ್ರಶ್ನೆ 2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೇ?

ಉತ್ತರಃ

**(ಆರೋಪಣೆಯನ್ನ ಆರೋಪಿಗೆ ಗೊತ್ತಿರುವ ಕನ್ನಡ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ, ಆರೋಪಿಯು ನೀಡಿದ ಉತ್ತರವನ್ನ ಯಾಥವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

**ಸಹಿ ಇದೆ.**

ದಿನಾಂಕಃ 10-01-2025.

**(ಶ್ರೀ ಬಿ.ಸಿ. ಚಂದ್ರಶೇಖರ್)**

ಸ್ಥಳಃ ಹೊನ್ನಾವರ

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**